

ಋಷಿಗಳೆ! ದಯಟ್ಟು ನನ್ನನ್ನು ಶಪಿಸಬೇಡಿ. ನಿಮಗಾಗಿ ನಾನು ಅಮೃತವನ್ನು ತಂದಿದ್ದೇನೆ. ಇದನ್ನು ಸ್ವೀಕರಿಸಿ.
ನನಗೆ ನಾಯಿ ಮಾಂಸವನ್ನು ಹಿಂದಿರುಗಿಸು. ನನಗೆ ಅಮೃತ ಬೇಕಾಗಿಲ್ಲ.
ಋಷಿಗಳೆ, ಕೃಪೆ ತೋರಿ!
11 ನಿನ್ನ ಅಮೃತವನ್ನು ನಾನು ಮತ್ತು ನನ್ನ ಶಿಷ್ಯಂದಿರು ಮಾತ್ರ ಸೇವಿಸಿ ಸುಖ ಪಡಬೇಕೆಂದು ನೀನು ಬಯಸಿದ್ದೀಯಾ? ನಾನು ಆ ರೀತಿ ಬಯಸುವ ಕೀಳು ವ್ಯಕ್ತಿಯಲ್ಲ. ಬರಗಾಲ ಹಾಗೂ ಬೇಸಿಗೆಯ ಬೇಗೆಯಿಂದ ಜನರು ತತ್ತರಿಸಿ ಹೋಗಿದ್ದಾರೆ. ಹಸುಕರುಗಳೂ ಸತ್ತುಹೋದವು. ಇದಕ್ಕೆಲ್ಲ ನೀನೇ ಕಾರಣ. ನನಗೆ ನಾಯಿಯ ಮಾಂಸವಷ್ಟೇ ದೊರಕಿದೆ. ಅದನ್ನೇ ನಾನು ದೇವತೆಗಳಾದ ನಿಮಗೆ ಅರ್ಪಿಸಿದರೆ ಅದರಲ್ಲೇನಿದೆ ತಪ್ಪು?
12 ಈಗ ಬೇರೆ ದಾರಿಯೇ ಇಲ್ಲವೆಂದು ಇಂದ್ರನಿಗೆ ಅರ್ಥವಾಯಿತು.
ಓ ಮಹಾತ್ಮ! ದಯಟ್ಟು ಕೋಪಿಸಬೇಡ. ದಯವಿಟ್ಟು ನನ್ನನ್ನು ಕ್ಷಮಿಸು. ನಾನು ಈಗಲೇ ಇಲ್ಲೆಲ್ಲ ಮಳೆ ಸುರಿಸುತ್ತೇನೆ.
13 ಕೂಡಲೇ ಇಂದ್ರ ಮೋಡಗಳನ್ನು ಕರೆದ. ಅಲ್ಲಿ ಆಗ ಧಾರಾಕಾರ ಮಳೆ ಸುರಿಯಿತು. ಬರಡಾಗಿದ್ದ ಭೂಮಿ ಹಸಿರು ಹಸಿರಾಯಿತು. ಎಲ್ಲೆಲ್ಲೂ ನೆಲ ಸಮೃದ್ಧಿಯಿಂದ ನಳನಳಿಸಿತು.
14 ಗಂಡಸರು, ಹೆಂಗಸರು, ಮಕ್ಕಳು ದನಕರುಗಳೊಂದಿಗೆ ತಮ್ಮ ತಮ್ಮ ಪ್ರದೇಶಕ್ಕೆ ಹಿಂದಿರುಗಿದರು.
ವಿಶ್ವಾಮಿತ್ರ ಋಷಿಗಳಿಗೆ ಜಯವಾಗಲಿ!
ವಿಶ್ವಾಮಿತ್ರ ಋಷಿಗಳು ತಮ್ಮ ಶಿಷ್ಯಂದಿರೊಡನೆ ಆ ಅಮೃತವನ್ನೇ ಸೇವಿಸಬಹುದಾಗಿತ್ತು. ಆದರೆ ಅವರ ಅನುಕಂಪ, ಕರುಣೆಗಳಿಂದಾಗಿ ನಮ್ಮ ಕಷ್ಟಗಳೆಲ್ಲ ದೂರವಾಯಿತು. ಮತ್ತೆ ನಮ್ಮ ಭೂಮಿ ಸಮೃದ್ಧವಾಯಿತು!
ವಿಶ್ವಾಮಿತ್ರ ಋಷಿಗಳಿಗೆ ಜಯವಾಗಲಿ!